ಕೆರೆಗಳನ್ನು ತೆಗೆದುಕೊಳ್ಳುವುದರ ಬದಲಾಗಿ ಎರಡೇ ಕೆರೆಗಳನ್ನು ತೆಗೆದುಕೊಳ್ಳಿ. ಅಲ್ಲಿ ಪೂರ್ಣ ಕೆಲಸವಾಗುವಂಥ ವ್ಯವಸ್ಥೆಯನ್ನು ನೀವು ಮಾಡದೇ ಇದ್ದರೆ ಅಲ್ಲಿ ಒದಗಿಸಿದಂಥ ಹಣ ಮೂವತ್ತು ಸಾವಿರ ರೂಪಾಯಿ ಏನಿದೆ ಅದರ ಪ್ರಕಾರ ಹತ್ತು ವರ್ಷ ಈ ರೀತಿಯಾಗಿ ಹಣ ಕೊಟ್ಟರೆ ಆ ಕೆರೆ ಉದ್ಧಾರವಾಗುವುದಿಲ್ಲ, ಆ ಕೆಲಸವೂ ಆಗುವುದಿಲ್ಲ. ಮತ್ತು ಆ ಕ್ಷೇತ್ರಕ್ಕೆ ನೀವು ಕಲ್ಯಾಣವನ್ನು ಕೂಡ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ವ್ಯವಸ್ಥೆಯನ್ನು ತಾವು ದಯವಿಟ್ಟು ಬದಲಾವಣೆ ಮಾಡಬೇಕು. ಈ ಪರಿಸ್ಥಿತಿಯನ್ನು ನೀವು ತಿಳಿಗೊಳಿಸಬೇಕೆಂದು ತಮ್ಮೂಲಕ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ, ಆ ಕಾರ್ಯಕ್ರಮವನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ವೈ ಕಗ್ಗಲ್ಲಿನ ಏತ ನೀರಾವರಿ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 187 (1396)

ಶ್ರೀ ಅಲ್ಲಂ ವೀರಬದ್ರಪ್ಪ (ಕುರುಗೋಡು):- ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಬಳ್ಳಾರಿ ತಾಲ್ಲೂಕಿನ ವೈ ಕಗ್ಗಲ್ಲಿನ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ?

2. 1996-97ನೇ ಸಾಲಿನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆಯೇ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):-

1. ಪರಿಶೀಲನಾ ಹಂತದಲ್ಲಿದೆ.

2. ಪರಿಶೀಲಿಸಲಾಗುವುದು.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೇ, ನಾವು ನಿರೀಕ್ಷೆ ಮಾಡಿದಂತೆ ನಾನು ಕೇಳಿರುವ ಪ್ರಶ್ನೆ ಬಳ್ಳಾರಿ ತಾಲ್ಲೂಕಿನ ವೆ.ಕಗ್ಗಲ್ಲಿನ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ ಎಂದರೆ ''ಪರಿಶೀಲನೆಯ ಹಂತದಲ್ಲಿದೆ'' ಎನ್ನುತ್ತಾರೆ. 1990ರಿಂದ ಈ ಪ್ರಶ್ನೆ ಕೇಳುತ್ತಲೇ ಬರುತ್ತಿದ್ದೇನೆ. ಇದು ಪರಿಶೀಲನೆಯ ಹಂತದಲ್ಲಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಇದು 10-15 ಹಳ್ಳಿಗಳಿಗೆ ಸಂಬಂಧಪಟ್ಟಿರುತ್ತದೆ. ನಮ್ಮ ಬಳ್ಳಾರಿ ಜಿಲ್ಲೆ ನಿಮಗೆಲ್ಲಾ ಗೊತ್ತಿರುವಂತೆ, ಕ್ಷಾಮ ಇರುವ ಜಿಲ್ಲೆ. ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಬಹಳ ಹಿಂದುಳಿದ ಹಳ್ಳಿಗಳು ಇವೆ. ಇದರಿಂದ ಸುಮಾರು ಎಂಟು ಸಾವಿರ ಎಕರೆ ನೀರಾವರಿಯಾಗುತ್ತಿದೆ. 1996ರಿಂದ ಕೇಳುತ್ತಲೇ ಬಂದಿದ್ದೇನೆ. ಇದಕ್ಕೆ ಪರಿಶೀಲನೆ,

ಪರಿಶೀಲನೆ ಎನ್ನುತ್ತಿದ್ದಾರೆ. ನಾವು ಇದರ ಬಗ್ಗೆ ಟೆಕ್ನಿಕಲಿ ಮಾತನಾಡಬೇಕೆಂದರೆ ಇದು ವಾಣಿವಿಲಾಸ ಸಾಗರಕ್ಕೆ ಸಂಬಂಧಪಟ್ಟಿದ್ದು ಆದರೂ ಕೂಡ ವಾಣಿವಿಲಾಸದ ನೀರು ನಮಗೆ ಬೇಕಾಗಿಲ್ಲ. ನಮ್ಮಲ್ಲಿ ರೀಜನರೇಟರ್ ಇದೆ, ಕೆನಾಲ್‌ಗಳು ಬರಬೇಕಾದರೆ ಆ ಹಳ್ಳಗಳು ರೀಜನರೇಟರ್‌ಗೂ ಅನುಕೂಲ ಆಗುತ್ತದೆ. ನಮಗೆ ತಿಳಿದಂತೆ, ಸುಮಾರು 45-48 ವರ್ಷಗಳಿಂದ ಆ ಹಳ್ಳದಲ್ಲಿ ನೀರಿದೆ. ಯಾರು ಈ ರೀತಿ ಮಾಡುತ್ತಿದ್ದಾರೋ ಎಂಬುದು ನನಗೆ ಗೊತ್ತಿಲ್ಲ. ದಯವಿಟ್ಟು ಎಕನಾಮಿಕಲಿ ಮಾತನಾಡಬೇಕೆಂದರೆ ಕೇವಲ ಹತ್ತು ಕೋಟಿ ರೂಪಾಯಿದಲ್ಲಿ ಎಂಟು ಸಾವಿರ ಎಕರೆಗೆ ನೀರಾವರಿ ಆಗುತ್ತದೆ. ಕೇವಲ ಹತ್ತು - ಹನ್ನೊಂದು ಸಾವಿರ ರೂಪಾಯಿ ಎಕರೆಗೆ ಖರ್ಚಾದಂತೆ ಆಗುತ್ತದೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದರಲ್ಲಿ ಎರಡು ವಿಚಾರಗಳನ್ನು ಬಹಳ ಪ್ರಧಾನವಾಗಿ ಯೋಚನೆ ಮಾಡಬೇಕಾದುದು ಎಂದರೆ ನೀರಿದೆಯೇ ಇಲ್ಲವೇ ಎನ್ನುವುದು. ಇದು ವೇದಾವತಿ ಸಬ್ ಬೇಸಿನ್‌ಗೆ ಸೇರಿರುವುದರಿಂದ ನಮ್ಮ ಕೃಷ್ಣಾ ಅವಾರ್ಡ್‌ನಲ್ಲಿ 42 ಟಿಎಂಸಿ ಆಗುವುದರಿಂದ ಅಲ್ಲಿ ನೀರು ಲಭ್ಯವಾಗುವುದು. ನಿಜ, ಇದು 6643 ಎಕರೆಗೆ ಆಗುತ್ತದೆ. 1993-94ರಲ್ಲಿ, ಎಕ್ಸಾಮಿನ್ ಮಾಡಿದ್ದಾರೆ. ನಾನು ಮತ್ತೆ ನನ್ನ ಸ್ನೇಹಿತರು ಬಂದು ನೋಡಿದ ಮೇಲೆ ಇಪ್ಪತ್ತು ದಿವಸಗಳ ಹಿಂದೆ ಮತ್ತೆ ರೀಎಕ್ಸಾಮಿನ್ ಮಾಡಬೇಕೆಂದು ಹೇಳಿದ್ದೇನೆ. ನಾನು ವಾಟರ್ ರಿಸೋರ್ಸ್ ಡೆವಲಪ್‌ಮೆಂಟ್‌ನವರಿಗೆ ಹೇಳಿ I will see that it is reexamined and also try to implement not this year, but next year.

ಶ್ರೀ ಎಂ.ದಿವಾಕರಬಾಬು:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಈ ಇರಿಗೇಷನ್ ಬಗ್ಗೆ ಹೇಳುವುದಾದರೆ ಅಲ್ಲಿ ಸಬ್ ಡಿವಿಜನ್ನೇ ಎತ್ತಿಬಿಟ್ಟಿದ್ದಾರೆ. ಅದನ್ನು ಎತ್ತಿದಮೇಲೆ ಲಿಫ್ಟ್ ಇರಿಗೇಷನ್ ಮಾಡುವುದು ಕಷ್ಟವಾಗುತ್ತಿವೆ. ಅಲ್ಲಿಂದ ಹದಿನೈದು ಸಾವಿರ ಎಕರೆಗೆ ಕಾಲುವೆಯನ್ನು ಮಾಡುವುದು ನಿಲ್ಲಿಸಿಬಿಟ್ಟಿದ್ದಾರೆ. ಆ ಸಬ್ ಡಿವಿಜನ್‌ನ್ನು ಎತ್ತಿದಮೇಲೆ ಅಲ್ಲಿ ವರ್ಕ್ ಪ್ರೋಗ್ರೆಸ್ ಆಗುತ್ತಿಲ್ಲ. ಆದ್ದರಿಂದ ತಕ್ಷಣ ಅವರು ಮತ್ತೆ ಸಬ್ ಡಿವಿಜನನ್ನು ಅಲ್ಲಿಯೇ ತರಬೇಕೆಂದು ತಮ್ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಪರಿಶೀಲನೆ ಮಾಡೋಣ.

ವಿಷಯ:- ಆಲೂರು ಸಿದ್ಧಾಪುರ ಗ್ರಾಮದಲ್ಲಿ ಪೊಲೀಸ್ ಠಾಣೆಯ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 188 (1212)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?